

ಕುಶಲತೆಗೆ ಬೆರಗಾಗಿ ಮೂಕವಾಗಿದೆ
ಕಾಲವಿಲ್ಲಿ...

ಭವ್ಯತೆ, ಕಲಾತ್ಮಕ ದ್ವಾರದ ರಮ್ಯತೆ, ಆವರಣಕ್ಕಿರುವ ಅಮೋಘ ಧೀರತೆಯನ್ನು ನೋಡುತ್ತಲೇ ಒಮ್ಮೆ ಸ್ತಂಭೀಭೂತನಾಗಿ ನಿಲ್ಲಬೇಕಾಯ್ತು. ಆವರಣದಲ್ಲಿ ಇನ್ನೇನು ಘೀಳಿಡುತ್ತವೆ ಎನ್ನುವಂತೆ ನಿಂತಿರುವ ಕಲ್ಲಿನ ಆನೆಗಳು ಗುಹೆಗಳ ಅಂತರಂಗದೊಳಗೆ ಇಳಿಯಲು ಅದ್ದೂರಿಯಾಗಿ ಸ್ವಾಗತಿಸುತ್ತಿತ್ತು. ಮುಖ್ಯವಾದ ಗುಹಾಮಂದಿರದೊಳಗೆ ಹೊಕ್ಕರೆ ಅಲ್ಲಿನ 148 ಅಡಿ ಎತ್ತರದ ಛಾವಣಿ, 15–20 ಅಡಿ ಎತ್ತರದ ಕಂಬಗಳು, ಅವುಗಳ ಮೇಲಿನ ಉಬ್ಬು ಶಿಲ್ಪಗಳು, ಬಿಲ್ಲುಗಳಂತೆ ಸಾಲು ಸಾಲಾಗಿ ಬಾಗಿದ ಕಲ್ಲುಗಳ ಅಂದಚೆಂದ, ಗುಹೆಯ ಮಧ್ಯದಲ್ಲಿರುವ ಮುಖ್ಯವಾದ ಆರಾಧನಾ ಸ್ತೂಪ, ಛಾವಣಿ ಮೇಲಿರುವ ಮೂರು ಸಿಂಹಗಳು ಇಡೀ ಕಂಬಗಳನ್ನು ತಮ್ಮ ಬಿಗಿಮುಷ್ಟಿಯಲ್ಲಿ ಹಿಡಿದಿರುವಂತೆ ಕಾಣುತ್ತವೆ.

ಅಂದಹಾಗೆ ಈ ಗುಹೆಯ ಇನ್ನೊಂದು ವಿಶೇಷ ಅಂದರೆ ಇದರ ಛಾವಣಿ ನಿರ್ಮಾಣಕ್ಕಾಗಿ ಮರವನ್ನು ಬಳಸಲಾಗಿದೆ. ಈ ಮರದ ಛಾವಣಿಯೂ ಕಲಾತ್ಮಕವಾಗಿದೆ. ಆದರೆ ಹೊರಾಂಗಣದ ಒಂದಷ್ಟು ಶಿಲ್ಪಗಳು ಕಾಲಾಂತರದಲ್ಲಿ ಪ್ರಾಕೃತಿಕ ವಿಕೋಪಕ್ಕೆ ಊನಗೊಂಡಿವೆ. ಉಳಿದಂತೆ ಗುಹೆಯ ಕುಸುರಿ ಕೆತ್ತನೆ, ಹದವಾದ ನುಣುಪು, ಇವುಗಳನ್ನೆಲ್ಲಾ ನೋಡುವ ಹಂಬಲದಲ್ಲಿ ಗುಹೆಯೊಳಗೆ ಕೊಂಚ ಕೊಂಚ ಇಣುಕುವ ನೈಸರ್ಗಿಕ ಬೆಳಕಿನ ನಡುವೆ, ಬೆಳಕಿಗಿಂತಲೂ ಸುತ್ತಲೂ ಹರಡಿರುವ ಕತ್ತಲಿನ ನಡುವೆ ನೋಡುವುದೇ ಒಂದು ಚುಂಬಕ ಅನುಭವ. ಈ ಕತ್ತಲು–ಬೆಳಕೇ ನಮ್ಮನ್ನು ಗತಕಾಲದ ಸುರಂಗದೊಳಗೆ ಹಂತಹಂತವಾಗಿ ಇಳಿಸಿಬಿಡುವಂತೆ, ಒಂದಷ್ಟು ಹೊತ್ತು ನಮ್ಮ ಸುತ್ತಲೂ ಭ್ರಾಮಕ ಜಗತ್ತನ್ನು ಧುತ್ತೆಂದು ತೆರೆಯಿಸಿಬಿಟ್ಟಂತೆ... ಹಾಗೇ ಕ್ಷಣಗಳು ಕಳೆದುಹೋದರೆ ನಾವು ನಿಜಕ್ಕೂ ಗತ ಕಾಲವೊಂದರ ಭಾಗವಾಗಿಬಿಟ್ಟಂತೆ... ಆಹಾ ಇದೇ ಎಷ್ಟೊಂದು ಚೆಂದದ ಅನುಭೂತಿ.

ಗುಹೆಗಳ ಸೂಕ್ಷ್ಮ, ಕಲಾತ್ಮಕ ಕೆತ್ತನೆಗಳ ವಿವರಣೆಗಳು, ಬೆಡಗು, ಆ ನುಣುಪುತನ, ಅಸಾಧಾರಣ ಸೌಂದರ್ಯ ನೋಡುತ್ತ ನಿಂತುಬಿಟ್ಟರೆ, ನಿಂತಲ್ಲಿಯೇ 2000 ವರ್ಷಗಳಷ್ಟು ಹಳೆಯದಾದ ಕಂಬಗಳ ನಡುವೆ, ಸ್ತೂಪಗಳ ನೆರಳು ಬೆಳಕುಗಳ ನಿಗೂಢ ಜಾಡೊಂದರಲ್ಲಿ ಹಗುರನೇ ಜಾರಿಹೋದಂತನ್ನಿಸುತ್ತದೆ.



ಭವ್ಯತೆಯಿಂದ ನೋಡುಗರನ್ನು ದಂಗುಪಡಿಸುವ ಗುಹಾಂತರ ದೇಗುಲ